**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 193/2019**

ಸಿಡಬ್ಲ್ಯು 8 ಪಿಡಬ್ಲ್ಯು- 2

ದಿನಾಂಕಃ 16.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಗೋಪಾಲ ಧರೆಪ್ಪಾ ಜಂಬಗಿ

ವಯಸ್ಸು : 34 ವರ್ಷ

ಉದ್ಯೋಗ : ಕೂಲಿ

ವಾಸ ಸ್ಥಳ : ಹಾರುಗೇರಿ

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾನು 2018 ರಲ್ಲಿ ಹಳ್ಳೂರ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮೀ ಕಿರಾಣಿ ಸ್ಟೋರನಲ್ಲಿ ಕೆಲಸ ಮಾಡುತ್ತಿದ್ದೆ. 4-5 ವರ್ಷದ ಹಿಂದೆ ಬೆಳಗ್ಗೆ 10.30 – 11.00 ಗಂಟೆ ಸುಮಾರಿಗೆ ನಾನು ಅಂಗಡಿಯಲ್ಲಿದ್ದಾಗ ಚಾಸಾ 6 ಬಂದು ತೂಕ ಮಾಡುವ ಯಂತ್ರ ಕೊಡು ಎಂದು ಕೇಳಿದಾಗ ನಾನು ತೂಕ ಮಾಡುವ ಯಂತ್ರ ಕೊಟ್ಟು ತೂಕ ಹೇಗೆ ಮಾಡಬೇಕೆಂದು ನಾನು ಮಾಹಿತಿ ಕೊಟ್ಟೆ . ಅದನ್ನು ಅದೇ ದಿನ ಮದ್ಯಾಹ್ನ 01.00 ಗಂಟೆಗೆ ವಾಪಸ್ಸು ತಂದು ಕೊಟ್ಟರು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ-** 3 ನೇ ಆರೋಪಿ ಪರ ಶ್ರೀ ಐ ಬಿ ಆರ್ ವಕೀಲರಿಂದಃ

ನಾನು ನಮ್ಮ ಅಂಗಡಿ ಮಾಲೀಕರಿಗೆ ಕೇಳಿ ತೂಕದ ಯಂತ್ರ ಕೊಟ್ಟಿದ್ದೇನೆ.

ನಾನು ಚಾಸಾ 6 ರಿಗೆ ತೂಕದ ಯಂತ್ರ ಆ ದಿನ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಮ್ಮ ಅಂಗಡಿ ಪೋಲಿಸ ಠಾಣೆ ಹತ್ತಿರ ಇದೆ ಅನ್ನುವದು ನಿಜ. ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

**ಪಾಟೀ ಸವಾಲುಃ-** 1 ನೇ ಆರೋಪಿ ಪರ ಶ್ರೀ ಎಲ್ ಬಿ ಪಿ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆಂದು ಹೇಳಿ ಪಾಟೀ ಸವಾಲು ಮಾಡಿರುವುದಿಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.